ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

ಮುಕುಂದ ಕೆ.ಜಿ. ಮತ್ತು ಇತರರು ವಿರುದ್ಧ ರಾಜ್ಯದ ಪರವಾಗಿ ಪಿಎಸ್ಐ ಕೆಟಿಜೆ ನಗರ ಪಿ.ಎಸ್

ಕ್ರಿಮಿನಲ್ ಅರ್ಜಿಸಂಖ್ಯೆ: 6051/2016,ದಿನಾಂಕ: 1 ನೇ ಡಿಸೆಂಬರ್, 2020.

ಆದೇಶ

ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್:

ಇದು ದಂಡ ಪ್ರಕ್ರಿಯಾ ಸಂಹಿತೆಯ 221 ನೇ ಪ್ರಕರಣದೊಂದಿಗೆ ಓದಲಾದ 216 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯನ್ನು ಪುರಸ್ಕರಿಸಿ, ಎಸ್.ಸಿ. ಸಂಖ್ಯೆ 73/2012 ರಲ್ಲಿ ದಾವಣಗೆರೆಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯವು ಹೊರಡಿಸಿದದಿನಾಂಕ: 26.07.2016 ರ ಆದೇಶವನ್ನು ಪ್ರಶ್ನಿಸಿ ಮತ್ತು ಆ ಮೂಲಕ ಅದನ್ನು ರದ್ದುಪಡಿಸಲು ಕೋರಿ ಅರ್ಜಿದಾರರು/ಆಪಾದಿತ ಸಂಖ್ಯೆ 1 ರಿಂದ 4 ರವರೆಗಿನ ಆರೋಪಿಗಳು ಸಲ್ಲಿಸಿದ ಅರ್ಜಿಯಾಗಿದೆ.

2. ವೀಡಿಯೋ ಕಾನ್ಫರೆನ್ಸ್ ಮುಖಾಂತರ ಹಾಜರಾದ ಮಾನ್ಯ ವಕೀಲ ಶ್ರೀ ಶಶಿಧರ ಎಚ್.ಎನ್ ಅವರ ಮತ್ತು ಖುದ್ದಾಗಿ ನ್ಯಾಯಾಲಯದ ಮುಂದೆ ಹಾಜರಾದ ರಾಜ್ಯದ ಪರ ಮಾನ್ಯ ಎಚ್ಸಿಜಿಪಿ ಅವರ ವಾದಗಳನ್ನು ಆಲಿಸಲಾಗಿದೆ. ವರದಕ್ಷಿಣೆ ನಿಷೇಧ ಅಧಿನಿಯಮ, 1961 ರ 3 ಮತ್ತು 4 ನೇ ಪ್ರಕರಣಗಳ ಜೊತೆಗೆ ಭಾರತ ದಂಡ ಸಂಹಿತೆಯ 1860 ರ 34 ನೇ ಪ್ರಕರಣದೊಂದಿಗೆ ಓದಲಾದ 498 ಎ, 302, 304 ಬಿ, 114 ನೇ ಪ್ರಕರಣಗಳ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳಿಗಾಗಿ, ಎಸ್.ಸಿ. ಸಂಖ್ಯೆ .73/2012 ಪ್ರಕರಣಕ್ಕೆ ಸಂಬಂಧಿಸಿದ ಆಪಾದಿತರ ವಿರುದ್ಧ ತನಿಖಾಧಿಕಾರಿಯು ದೋಷಾರೋಪ ಪಟ್ಟಿಯನ್ನು ಮಂಡಿಸಿದ್ದಾರೆಂಬುದನ್ನು ಇದು ಸ್ಪಷ್ಟಪಡಿಸುತ್ತದೆ.ತನಿಖಾ ಏಜೆನ್ಸಿಯು ದೋಷಾರೋಪ ಪಟ್ಟಿಯನ್ನು ಮಂಡಿಸಿದ ನಂತರ, ಪ್ರಕರಣವನ್ನು ಅಧಿವಿಚಾರಣೆಗಾಗಿ ಸೆಷನ್ಸ್ ನ್ಯಾಯಾಲಯಕ್ಕೆ ಒಪ್ಪಿಸಲಾಗಿದೆ.ಅಂತೆಯೇ, ಎಸ್.ಸಿ.ಸಂ .73/2012 ರಲ್ಲಿನ ಪ್ರಕರಣವನ್ನು ದಾವಣಗೆರೆಯ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯದ ಮುಂದೆ ವಹಿಸಿಕೊಡಲಾಗಿದೆ.ಆ ಪ್ರಕರಣವನ್ನು ಅಧಿವಿಚಾರಣೆಗಾಗಿ ವಹಿಸಿಕೊಟ್ಟ ನಂತರದಿನಾಂಕ: 09.06.2015 ರಂದು ಆರೋಪಿಗಳ ವಿರುದ್ಧ ದೋಷಾರೋಪಗಳನ್ನು ರೂಪಿಸಲಾಯಿತು.ಅಧಿವಿಚಾರಣಾ ನ್ಯಾಯಾಲಯವು ವಾದವನ್ನು ಸಹ ದಾಖಲಿಸಿತು.ದೋಷಾರೋಪಗಳನ್ನು ರೂಪಿಸಿದ ನಂತರ, ಪ್ರಕರಣವನ್ನು ಅಧಿವಿಚಾರಣೆಗಾಗಿ ನಿಗದಿಪಡಿಸಲಾಗಿದೆ.ಪರಿಣಾಮವಾಗಿ, ಅಧಿವಿಚಾರಣೆಯನ್ನು ಪ್ರಾರಂಭಿಸಲಾಗಿದೆ ಮತ್ತು ಎಸ್.ಸಿ.ಸಂಖ್ಯೆ: 73/2012 ರಲ್ಲಿ ಪ್ರಾಸಿಕ್ಯೂಷನ್ ಹಲವರು ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿದೆ ಹಾಗೂ ಆರೋಪಿಗಳ ಅಪರಾಧವನ್ನು ಸಾಬೀತು ಮಾಡುವ ಸಲುವಾಗಿ ಹಲವಾರು ದಸ್ತಾವೇಜುಗಳನ್ನು ಸಹ ಗುರುತು ಮಾಡಿದೆ.ಪ್ರಾಸಿಕ್ಯೂಷನ್ನ ಸಾಕ್ಷ್ಯಗಳ ಮುಕ್ತಾಯದ ತರುವಾಯ, ಪ್ರಾಸಿಕ್ಯೂಷನ್ ಕಡೆಯಿಂದ ಹಾಗೂ ಪ್ರತಿವಾದಿ ವಕೀಲರ ಕಡೆಯಿಂದ ವಾದಗಳನ್ನು ಕೇಳಲು ಪ್ರಕರಣವನ್ನು ನಿಗದಿಪಡಿಸಲಾಯಿತು.ಆದರೆ, ಈ ಅರ್ಜಿಯಲ್ಲಿ,ದಿನಾಂಕ: 16.09.2016 ರ ಆದೇಶದ ಮೂಲಕ ಈ ನ್ಯಾಯಾಲಯವು ಮುಂದಿನ ಆದೇಶದವರೆಗೆ, ದಂಡ ಪಕ್ರಿಯಾ ಸಂಹಿತೆಯ 313 ನೇ ಪ್ರಕರಣದ ಅಡಿಯಲ್ಲಿ ಯೋಜಿಸಲಾದಂತೆ ಆರೋಪಿಗಳ ದೋಷಾರೋಪಣೆಯ ಹೇಳಿಕೆಗಳನ್ನು ದಾಖಲಿಸಿದ ನಂತರ ಪ್ರಾಸಿಕ್ಯೂಷನ್ನಿನ ಸಂಪೂರ್ಣ ಪ್ರಕರಣವನ್ನು

ಮುಕ್ತಾಯಗೊಳಿಸಲಾಗಿದೆ ಎಂದು ಸೂಚಿಸುತ್ತದೆ.ಆ ನಂತರ, ಪ್ರಕರಣವನ್ನು ವಾದ-ಪ್ರತಿವಾದಗಳಿಗಾಗಿ ಮುಂದೂಡಲಾಗಿದೆ ಮತ್ತು ಅದಾದ ನಂತರ, ಎಸ್.ಸಿ.ಸಂಖ್ಯೆ .73/2012 ರಲ್ಲಿ ತೀರ್ಪು ನೀಡಲು ನಿಗದಿಪಡಿಸಲಾಗಿದೆ.

ಈ ಮಧ್ಯೆ, ಎಸ್.ಸಿ.ಸಂ .73/2012 ರಲ್ಲಿ ಅಧಿವಿಚಾರಣೆ ನಡೆಯುತ್ತಿದ್ದಾಗ ಆರೋಪಿಗಳ ವಿರುದ್ಧ ತನಿಖಾಧಿಕಾರಿಯು ಸಲ್ಲಿಸಿದ ದೋಷಾರೋಪ ಪಟ್ಟಿಯ ಸಾರಾಂಶದಲ್ಲಿ ಸೂಚಿಸಿದಂತೆ, ಆತ್ಮಹತ್ಯೆ ಮಾಡಿಕೊಂಡ ಲತಾ ಎಂಬುವವರ ಸಾವಿಗೆ ಸಂಬಂಧಿಸಿ, ಐಪಿಸಿ ಸೆಕ್ಷನ್ 306 ರ ಉಪಬಂಧಗಳನ್ನು ಅನ್ವಯಿಸಲು ಕೋರಿ, ಅನುಬಂಧ- ' ಸಿ ' ಪ್ರಕಾರ ದಂಡ ಪ್ರಕ್ರಿಯಾ ಸಂಹಿತೆಯ 221 ನೇ ಪ್ರಕರಣದೊಂದಿಗೆ ಓದಲಾದ 216 ನೇ ಪ್ರಕರಣದ ಅಡಿಯಲ್ಲಿ ಪ್ರಾಸಿಕ್ಯೂಷನ್ ಅರ್ಜಿಯನ್ನು ಸಲ್ಲಿಸಿತು.

3. ಪ್ರಾಸಿಕ್ಯೂಷನ್ ಸಲ್ಲಿಸಿದ ಅರ್ಜಿಯನ್ನು ವಿರೋಧಿಸಲು ಪ್ರತಿವಾದಿ ವಕೀಲರು ಸಲ್ಲಿಸಿದ ಆಕ್ಷೇಪಣೆಯ ಮುಖಾಂತರ ಅರ್ಜಿದಾರರ ಪರ ಮಾನ್ಯ ವಕೀಲರು ನನ್ನ ಗಮನವನ್ನು ಸೆಳೆದಿದ್ದಾರೆ.ಅದರಲ್ಲಿ ವಧು-ವರ ವರದಕ್ಷಿಣೆ ನಿಷೇಧ ಅಧಿನಿಯಮ, 1961 ರ 3 ಮತ್ತು 4 ನೇ ಪ್ರಕರಣಗಳ ಜೊತೆಗೆ ಐಪಿಸಿ 34 ನೇ ಪ್ರಕರಣದೊಂದಿಗೆ ಓದಲಾದ 498 ಎ, 302, 114, 304 ಬಿ ಪ್ರಕರಣಗಳ ಅಡಿಯಲ್ಲಿ ದೊಡ್ಡ ಅಪರಾಧಗಳಿಗೆ ಸಂಬಂಧಿಸಿದಂತೆ ಆರೋಪಿಗಳ ವಿರುದ್ಧ ದೋಷಾರೋಪಗಳನ್ನು ರೂಪಿಸಲಾಯಿತು ಎಂದು ವಾದಿಸಲಾಗಿದೆ.ಆರೋಪಪಟ್ಟಿಯಲ್ಲಿ ಸೂಚಿಸಲಾದ ಅಪರಾಧಗಳನ್ನು ಅಧಿವಿಚಾರಣಾ ನ್ಯಾಯಾಲಯವು ರೂಪಿಸಿದೆ.ಆ ನಂತರ, ಆರೋಪಿಗಳ ಅಪರಾಧವನ್ನು ಸಾಬೀತುಪಡಿಸುವ ಸಲುವಾಗಿ, ಪ್ರಾಸಿಕ್ಯೂಷನ್ನ ಸಾಕ್ಷ್ಯವನ್ನು ನಡೆಸಲಾಯಿತು.ಆದರೆ, ಶ್ರೀಮತಿ ಲತಾ ಅವರ ಇಡೀ ಕುಟುಂಬವು ಮಾನಸಿಕ ಅಸ್ವಸ್ಥತೆ ಮತ್ತು ಖಿನ್ನತೆಯಿಂದ ಬಳಲುತ್ತಿದ್ದರು.ಪಿಡಬ್ಲ್ಯು .1 ಅನ್ನು ಪ್ರಾಸಿಕ್ಯೂಷನ್ ಕಡೆಯಿಂದ ಪರೀಕ್ಷೆಗೆ ಒಳಪಡಿಸಲಾಯಿತು.ಅದರಲ್ಲಿ ಅವರು ತಮ್ಮ ಅಳಿಯ, ಎಂದರೆ, ಮುಕುಂದ ಖಾಸಗಿ ಬಸ್ಸಿನಲ್ಲಿ ಚಾಲಕನಾಗಿದ್ದನು ಎಂದು ಹೇಳಿದ್ದಾರೆ.ಬೆಳಿಗ್ಗೆ ಕೆಲಸಕ್ಕೆ ಹಾಜರಾಗಲು ಮನೆಯಿಂದ ಹೋಗಿದ್ದ ಮತ್ತು ಅವನು ರಾತ್ರಿ ಮನೆಗೆ ಹಿಂದಿರುಗುತ್ತಿದ್ದ.ಆದರೆ, ಲತಾಳ ಗಂಡ ಇನ್ನೊಬ್ಬ ಮಹಿಳೆಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದ ಬಗ್ಗೆ ಬ ಗಂಡ-ಹೆಂಡತಿಯ ಮಧ್ಯೆ ಕೆಲ ವಿವಾದಗಳಿದ್ದ ಕಾರಣ, ತಮ್ಮ ಮಗಳಾದ ಲತಾಗೆ ಅವನು ಕಿರುಕುಳ ನೀಡುತ್ತಿದ್ದನೆಂದು ಹೇಳಲಾಗಿದೆ.ಇದು ಪಿಡಬ್ಲ್ಯು.1ನ ಕೆಲವು ಭಾಗಗಳಲ್ಲಿನ ಸಾಕ್ಷ್ಯವಾಗಿದೆ ಮತ್ತು ಪಿಡಬ್ಲ್ಯು.ನ ಪಾಟೀ-ಸವಾಲಿನಲ್ಲಿ ಸ್ಪಷ್ಟವಾಗಿದೆ.ಆದರೆ, ಇದು ಸಾಕ್ಷ್ಯಗಳ ಗುಣಾವಗುಣಗಳ ಮೇಲೆ ಮಾತ್ರ ಆಧಾರಪಟ್ಟಿದ್ದು, ಇದನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ಮತ್ತು ಇತರ ಸಾಕ್ಷಿದಾರರಿಗೆ ಸಹ ನಿಹಿತಗೊಳಿಸಲಾಗಿದೆ.ಭಾರತ ದಂಡ ಸಂಹಿತೆಯ 1860 ರ 306 ನೇ ಪ್ರಕರಣದ ಅಡಿಯಲ್ಲಿ 1 ರಿಂದ 4 ರವರೆಗಿನ ಆರೋಪಿಗಳ ವಿರುದ್ಧ ಆರೋಪ ಹೊರಿಸಲು ಪ್ರಾಸಿಕ್ಯೂಷನ್ ಕಡೆಯಿಂದ ಯಾವುದೇ ಸಾಕ್ಷ್ಯವಿಲ್ಲ ಎಂದು ಮಾನ್ಯ ವಕೀಲರು ಮುಖ್ಯವಾಗಿ ವಾದಿಸಿದ್ದಾರೆ ಮತ್ತು ಅದಕ್ಕೆ ಒತ್ತು ನೀಡಿದ್ದಾರೆ.ಆದುದರಿಂದ, ವಿಳಂಬಿತ ಹಂತದಲ್ಲಿ, ದಂಡ ಪ್ರಕ್ರಿಯಾ ಸಂಹಿತೆಯ 221 ನೇ ಪ್ರಕರಣದೊಂದಿಗೆ ಓದಲಾದ 216 ನೇ ಪ್ರಕರಣದ ಅಡಿಯಲ್ಲಿ ಪ್ರಾಸಿಕ್ಯೂಷನ್ ಅರ್ಜಿಯನ್ನು ಸಲ್ಲಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಮತ್ತು ಅದು ಆರಂಭದಲ್ಲೇ ವಜಾಗೊಳಿಸಲು ತಕ್ಕದ್ದಾಗಿದೆ.ಈ ಎಲ್ಲಾ ಕಾರಣಗಳ ಆಧಾರದ ಮೇಲೆ, ಅರ್ಜಿದಾರರ ಪರ ಮಾನ್ಯ ವಕೀಲರು, ಆರೋಪವನ್ನು ರೂಪಿಸಲು ಮತ್ತು ಅಧಿವಿಚಾರಣೆಗಾಗಿ ಪ್ರಕರಣವನ್ನು ಮುಂದುವರೆಸಲು ಭಾರತ ದಂಡ ಸಂಹಿತೆ'ಯ 306 ನೇ ಪ್ರಕರಣದ ಅಡಿಯಲ್ಲಿ ಅಪರಾಧವನ್ನು ಅನ್ವಯಿಸಿ ಅರ್ಜಿಯನ್ನು ಪುರಸ್ಕರಿಸಿ, ಎಸ್.ಸಿ.ಸಂ .73/2012ದಿನಾಂಕ: 26.07.2016 ರಲ್ಲಿ ದಾವಣಗೆರೆಯ ಪ್ರಧಾನ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರ ನ್ಯಾಯಾಲಯವು ಹೊರಡಿಸಿದ ಆದೇಶವನ್ನು ರದ್ದುಗೊಳಿಸುವ ಮೂಲಕ ಈ ಅರ್ಜಿಯನ್ನು ಪುರಸ್ಕರಿಸಲು ಕೋರಿದ್ದಾರೆ.

4. ಅದಕ್ಕೆ ವಿರುದ್ಧವಾಗಿ, ರಾಜ್ಯದ ಮಾನ್ಯ ಎಚ್ಸಿಜಿಪಿಯವರು ಭಾರತ ದಂಡ ಸಂಹಿತೆಯ 306 ನೇ ಪ್ರಕರಣದ ಅಡಿಯಲ್ಲಿ ಹೆಚ್ಚುವರಿ ಆರೋಪವನ್ನು ರೂಪಿಸಲು ಕೋರಿ, ದಂಡ ಪ್ರಕ್ರಿಯಾ ಸಂಹಿತೆಯ 221 ನೇ ಪ್ರಕರಣದೊಂದಿಗೆ ಓದಲಾದ 216 ನೇ ಪ್ರಕರಣದ ಅಡಿಯಲ್ಲಿ ಪ್ರಾಸಿಕ್ಯೂಷನ್ ಸಲ್ಲಿಸಿದ ಅರ್ಜಿಯನ್ನು ನನ್ನ ಗಮನಕ್ಕೆ ತಂದಿದ್ದಾರೆ.ಮೃತ ಲತಾ ತನ್ನ ಪತಿಯಿಂದ ಮತ್ತು ಅದೇ ರೀತಿ, ಇತರ ಆರೋಪಿಗಳಿಂದ ದೈಹಿಕ ಹಾಗೂ ಮಾನಸಿಕ ಕಿರುಕುಳದ ಕಾರಣದಿಂದ ತನ್ನ ಗಂಡನ ಮನೆಯಲ್ಲಿ ಸಾವನ್ನಪ್ಪಿದ್ದಳು.ತನಿಖಾಧಿಕಾರಿಯು ಸಲ್ಲಿಸಿದ ದೋಷಾರೋಪ ಪಟ್ಟಿಯ ಸಾರಾಂಶದಲ್ಲಿ ಉಲ್ಲೇಖಿಸಲಾದಂತೆ ಅರ್ಜಿದಾರರು ಕೊಟ್ಟ ದೈಹಿಕ ಹಾಗೂ ಮಾನಸಿಕ ಚಿತ್ರಹಿಂಸೆಯಿಂದ ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.ವಧು-ವರ ವರದಕ್ಷಿಣೆ ನಿಷೇಧ ಅಧಿನಿಯಮ, 1961 ರ 3 ಮತ್ತು 4 ನೇ ಪ್ರಕರಣಗಳ ಜೊತೆಗೆ, ಭಾರತ ದಂಡ ಸಂಹಿತೆಯ 498 ಎ, 302, 304 ಬಿ ಮತ್ತು 114 ನೇ ಪ್ರಕರಣದ ಅಡಿಯಲ್ಲಿ ಬರುವ ಅಪರಾಧಗಳಿಗೂ ಸಹ ಪ್ರಾಸಿಕ್ಯೂಷನ್ ಪ್ರಕರಣವನ್ನು ವಿಚಾರಣೆಗೆ ಒಳಪಡಿಸಿದೆ.ಮೇಲೆ ಹೇಳಲಾದ ಅಪರಾಧಗಳಿಗೆ ಸಂಬಂಧಿಸಿದಂತೆ ಆರೋಪಿಗಳ ವಿರುದ್ಧ ದೋಷಾರೋಪಗಳನ್ನು ರೂಪಿಸಿದ್ದಾಗ್ಯೂ, ಮೃತ ಲತಾ ಖಿನ್ನತೆ ಹಾಗೂ ಮಾನಸಿಕ ಅಸ್ವಸ್ಥತೆಯಿಂದಾಗಿ ಮೃತಪಟ್ಟಳು.ಹಾಗಿದ್ದರೂ, ಇದು ಪಾಟಿ ಸವಾಲಿನಲ್ಲಿ ಬೆಳಕಿಗೆ ಬಂದಿತು.ಆದರೆ, ಅಧಿವಿಚಾರಣೆ ಮುಕ್ತಾಯಗೊಂಡ ನಂತರ ಮತ್ತು ದಸ್ತಾವೇಜುಗಳನ್ನು ಗುರುತು ಮಾಡಿದ ಸಾಕ್ಷ್ಯಗಳ ಗುಣಾವಗುಣಗಳನ್ನು ವಿವೇಚಿಸಲು ಮಾತ್ರವೇ ಅಧಿವಿಚಾರಣಾ ನ್ಯಾಯಾಲಯಕ್ಕೆ ನಿಹಿತಗೊಳಿಸಿದ ಅಧಿಕಾರವಾಗಿದೆ.ಲತಾಳು ತನ್ನ ಗಂಡ ಮತ್ತು ಇತರ ಆರೋಪಿಗಳಿಂದ ದೈಹಿಕ ಮತ್ತು ಮಾನಸಿಕ ಕಿರುಕುಳಕ್ಕೊಳಗಾದ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಳು.ಅದರಲ್ಲಿ, ಆಕೆಯ ಗಂಡ ಮತ್ತೊಬ್ಬ ಹೆಂಗಸಿನೊಂದಿಗೆ ಅಕ್ರಮ ಸಂಬಂಧ ಹೊಂದಿದ್ದನೆಂದು ಹೇಳಲಾಗಿದ್ದು, ಅದು ಅವಳು ಮಾನಸಿಕ ಖಿನ್ನತೆಗೆ ಒಳಗಾಗಿ, ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವಾಯಿತು.ಆದುದರಿಂದ, ಭಾರತ ದಂಡ ಸಂಹಿತೆಯ 306 ನೇ ಪ್ರಕರಣವನ್ನು ಅನ್ವಯಿಸಲಾಗಿದೆ ಮತ್ತು ಹೆಚ್ಚುವರಿ ಆರೋಪವನ್ನು ರೂಪಿಸಲಾಗಿದೆ.ಇಲ್ಲದಿದ್ದರೆ, ನ್ಯಾಯೋದ್ದೇಶವನ್ನು ಈಡೇರಿಸುವಲ್ಲಿ ಪ್ರಾಸಿಕ್ಯೂಷನ್ ಕಡೆಯಿಂದ ನಿಶ್ಚಿತವಾಗಿ ನ್ಯಾಯವಿಫಲತೆ ಉಂಟಾಗುತ್ತಿತ್ತು.ಈ ಎಲ್ಲಾ ಆಧಾರಗಳ ಮೇಲೆ, ರಾಜ್ಯದ ಮಾನ್ಯ ಎಚ್ಚಿಪಿರವರು ಈ ಅರ್ಜಿಯನ್ನು ವಜಾಗೊಳಿಸಲು ಮತ್ತು ಆ ಮೂಲಕ, ದಂಡ ಪ್ರಕ್ರಿಯಾ ಸಂಹಿತೆಯ 221 ನೇ ಪ್ರಕರಣದೊಂದಿಗೆ ಓದಲಾದ 216 ನೇ ಪ್ರಕರಣದ ಅಡಿಯಲ್ಲಿ, ಪ್ರಾಸಿಕ್ಯೂಷನ್ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ, ಎಸ್.ಸಿ.ಸಂ .73/2012 ರಲ್ಲಿ ದಿನಾಂಕ 26-7-2016ರಂದು ದಾವಣಗೆರೆಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯವು ಹೊರಡಿಸಿದ ಆದೇಶವನ್ನು ದೃಢೀಕರಿಸಲು ಕೋರಿದ್ದಾರೆ.

5. ವಾದವಿವಾದಗಳ ಸಂದರ್ಭದಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 216 ( 1) ನೇ ಪ್ರಕರಣವನ್ನು ಉಲ್ಲೇಖಿಸುವುದು ಸೂಕ್ತವಾಗಿದ್ದು, ಅದನ್ನು ಈ ಮುಂದಿನಂತೆ ಓದಲಾಗುತ್ತದೆ:

"216. ನ್ಯಾಯಾಲಯವು ಆರೋಪವನ್ನು ಬದಲಾಯಿಸಬಹುದು.

(1) ಯಾವುದೇ ನ್ಯಾಯಾಲಯವು ತೀರ್ಪನ್ನು ಪ್ರಕಟಿಸುವ ಮೊದಲು, ಯಾವುದೇ ಸಮಯದಲ್ಲಿ ಯಾವುದೇ ಆರೋಪವನ್ನು ಬದಲಾಯಿಸಬಹುದು ಅಥವಾ ಸೇರ್ಪಡೆ ಮಾಡಬಹುದು.

ಆದ್ದರಿಂದ, ಯಾವುದೇ ನ್ಯಾಯಾಲಯವು ತೀರ್ಪನ್ನು ಪ್ರಕಟಿಸುವ ಮೊದಲು ಯಾವುದೇ ಸಮಯದಲ್ಲಿ ಯಾವುದೇ ಆರೋಪವನ್ನು ಬದಲಾಯಿಸಬಹುದು ಅಥವಾ ಸೇರ್ಪಡೆ ಮಾಡಬಹುದು.

6. ಆದರೆ, ಸದ್ಯದ ಪ್ರಕರಣದಲ್ಲಿ, ವಧು-ವರ ವರದಕ್ಷಿಣೆ ನಿಷೇಧ ಅಧಿನಿಯಮದ 3 ಮತ್ತು 4 ನೇ ಪ್ರಕರಣಗಳ ಜೊತೆಗೆ ಭಾರತ ದಂಡ ಸಂಹಿತೆಯ 34 ನೇ ಪ್ರಕರಣದೊಂದಿಗೆ ಓದಲಾದ 498 ಎ, 302, 304 ಬಿ, 114 ಪ್ರಕರಣಗಳ ಅಡಿಯಲ್ಲಿ ಬರುವ ಅಪರಾಧಗಳಿಗಾಗಿ ಪ್ರಾರಂಭದಲ್ಲಿಯೇ ಆರೋಪಿಗಳ ವಿರುದ್ಧ ದೋಷಾರೋಪಗಳನ್ನು ರೂಪಿಸಲಾಯಿತು.ಆರೋಪಿಗಳ ವಿರುದ್ಧ ದೊಡ್ಡ ಅಪರಾಧಗಳನ್ನು ಹೊರಿಸಿ, ದೋಷಾರೋಪಗಳನ್ನು ರೂಪಿಸಿದ್ದಾಗ, ಪ್ರಾಸಿಕ್ಯೂಷನ್ ಒದಗಿಸಿದ ಸಾಕ್ಷ್ಯದ ಆಧಾರದ ಮೇಲೆ ಹಾಗೂ ಆರೋಪಿಗಳ ವಿರುದ್ಧ ಹೊರಿಸಲಾದ ದೋಷಾರೋಪಗಳನ್ನು ಸಾಬೀತುಪಡಿಸುವುದಕ್ಕೆ ಸಂಬಂಧಿಸಿದ ದಸ್ತಾವೇಜುಗಳನ್ನು ಗುರುತು ಮಾಡುವುದರ ಮೇಲೆ ಒಂದು ತೀರ್ಮಾನಕ್ಕೆ ಬರಲು ಅಧಿವಿಚಾರಣಾ ನ್ಯಾಯಾಲಯಕ್ಕೆ ನಿಹಿತಗೊಳಿಸಿದ ಅಧಿಕಾರವಾಗಿದೆ ಎಂಬ ಕಾನೂನಿನ ಸುಸ್ಥಾಪಿತವಾದ ನಿಯಮಗಳಿಗೆ ಸಂಬಂಧಿಸಿದಂತೆ ಯಾವುದೇ ವಿವಾದವಿಲ್ಲ.ಆದರೆ ಅದನ್ನು ಸಾಕ್ಷ್ಯಗಳ ಗುಣಾವಗುಣಗಳ ವಿವೇಚನೆಯ ಮೇಲೆ ಮತ್ತು ಪ್ರಾಸಿಕ್ಯೂಷನ್ ಕಡೆಯಿಂದ ಗುರುತಿಸಲಾದ ಮುಖ್ಯ ದಸ್ತಾವೇಜುಗಳ ಗುಣಾವಗುಣಗಳ ವಿವೇಚನೆಯ ಮೇರೆಗೆ ಮಾತ್ರ ಮಾಡಿದ್ದಾಗಿದೆ.ಆದಾಗ್ಯೂ, ಸದ್ಯದ ಪ್ರಕರಣದಲ್ಲಿ, ಅರ್ಜಿದಾರರು/ಆರೋಪಿಗಳು ತಮ್ಮ ವಿರುದ್ಧ ಹೊರಿಸಲಾದ ಆರೋಪಗಳ ಮುಖ್ಯ ವ್ಯಕ್ತಿಗಳಾಗಿದ್ದು, ಅವರು ಅಧಿವಿಚಾರಣಾ ನ್ಯಾಯಾಲಯವು ಈಗಾಗಲೇ ರೂಪಿಸಿರುವ ಆರೋಪಗಳಿಗೆ ಸಂಬಂಧಿಸಿದ ಅಪರಾಧಗಳಿಗಾಗಿ ಅಧಿವಿಚಾರಣೆಯನ್ನು ಎದುರಿಸಬೇಕಾಗುತ್ತದೆ ಮತ್ತು ಆ ನಂತರ ಆರೋಪಿಗಳ 313 ಹೇಳಿಕೆಗಳನ್ನು ದಾಖಲಿಸಲು ತೀರ್ಪಿಗಾಗಿ ನಿಗದಿಪಡಿಸಲು ಪ್ರಕರಣವನ್ನು ಮುಂದುವರಿಸಬೇಕು.ಆದರೆ, ಅಷ್ಟರಲ್ಲೇ ಪ್ರಾಸಿಕ್ಯೂಷನ್ ದಂಡ ಪ್ರಕ್ರಿಯಾ ಸಂಹಿತೆಯ 216 ( 1) ನೇ ಪ್ರಕರಣದ ಉಪಬಂಧಗಳನ್ನು ಬಳಸಿಕೊಂಡಿದೆ.ತೀರ್ಪನ್ನು ಪ್ರಕಟಿಸುವ ಮೊದಲು ಯಾವುದೇ ನ್ಯಾಯಾಲಯವು ಯಾವುದೇ ಆರೋಪವನ್ನು ಬದಲಾಯಿಸಬಹುದು ಅಥವಾ ಸೇರ್ಪಡೆ ಮಾಡಬಹುದು ಎಂಬ ಕಾರಣದಿಂದಾಗಿ ' ಬಹುದು ' ಎಂಬ ಪದವನ್ನು ಅಧಿವಿಚಾರಣಾ ನ್ಯಾಯಾಲಯವು ಆರೋಪಿಗಳು ಅಧಿವಿಚಾರಣೆಯನ್ನು ಎದುರಿಸಲು ಅಗತ್ಯಪಡಿಸಿರುವ ಯಾವುದೇ ಆರೋಪವನ್ನು ಬದಲಿಸಲು ಅಥವಾ ಸೇರ್ಪಡೆ ಮಾಡಲು ದಂಡ ಪ್ರಕ್ರಿಯಾ ಸಂಹಿತೆಯ 216 ( 1) ನೇ ಪ್ರಕರಣದ ಉದ್ದೇಶ ಮತ್ತು ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು, ಕಟ್ಟುನಿಟ್ಟಾದ ಪ್ರಜ್ಞೆಯಲ್ಲಿ ಅಧಿಕಾರವನ್ನು ಚಲಾಯಿಸಬೇಕು ಎಂದು ಸೂಚಿಸಲಾಗಿದೆ.ಆದರೆ, ಅಂಗೀಕರಿಸಲಾದಂತೆ, ಲತಾ ತನ್ನ ಗಂಡನ ಮನೆಯಲ್ಲಿ ಸಾವನ್ನಪ್ಪಿದ್ದಾಳೆ.ಇಡೀ ಪ್ರಕರಣವನ್ನು ಅಧಿವಿಚಾರಣೆಗಾಗಿ ನಿಗದಿಪಡಿಸಿ, ಆರೋಪಿಗಳ ವಿರುದ್ಧ ದೋಷಾರೋಪಣೆಯ ಹೇಳಿಕೆಗಳನ್ನು ಸಹ ದಾಖಲಿಸಲಾಗಿದೆ.ಅಲ್ಲದೆ, ಪ್ರಾಸಿಕ್ಯೂಷನ್ ಕಡೆಯಿಂದ ಹಾಗೂ ಪ್ರತಿವಾದದ ಕಡೆಯಿಂದ ಸಹ ವಾದಗಳನ್ನು ಆಲಿಸಲಾಗಿದೆ ಎಂಬುದನ್ನು ಇಲ್ಲಿ ಗಮನಿಸಲಾಗಿದೆ.ನಂತರ, ತೀರ್ಪಿನ ಘೋಷಣೆಗೆ ಮುಂದಾಗಿದೆ.ಅದನ್ನೇ ಈ ಅರ್ಜಿಯಲ್ಲಿ ಸೂಚಿಸಲಾಗಿದ್ದು, ಆ ಮೂಲಕ ಅಧಿವಿಚಾರಣಾ ನ್ಯಾಯಾಲಯವು ಜಾರಿಗೊಳಿಸಿದ ಪ್ರಶ್ನೆತ ಆದೇಶವನ್ನು ಪ್ರಶ್ನಿಸಲು ತಡೆಯಾಜ್ಞೆಯನ್ನು ನೀಡಲಾಗಿದೆ.ಆದ್ದರಿಂದ, ಆರೋಪಿಗಳ ವಿರುದ್ಧ ದೊಡ್ಡ ಅಪರಾಧಗಳು ಹೊರಿಸಿದಾಗ ಮತ್ತು ಆರೋಪಗಳನ್ನು ರೂಪಿಸಿದಾಗ ಹಾಗೂ ಪ್ರಾಸಿಕ್ಯೂಷನ್ ಅಧಿವಿಚಾರಣೆಗೆ ಮುಂದಾದಾಗ ಹಾಗೂ ಪ್ರಾಸಿಕ್ಯೂಷನ್ ಪ್ರಕರಣವನ್ನು ಮುಕ್ತಾಯಗೊಳಿಸಿದಾಗ, ಪ್ರಕರಣವನ್ನು ಎಸ್.ಸಿ. ಸಂಖ್ಯೆ .73/2012 ರಲ್ಲಿ ತೀರ್ಪನ್ನು ಪ್ರಕಟಿಸಲು ಇಡಲಾಗಿದೆ ಎಂದು ಹೇಳಲಾಗಿದೆ.ಈ ಮಧ್ಯೆ, ಕಾನೂನು ಅವಕಾಶ ನೀಡುತ್ತದೆಂಬ

ಕಾರಣಕ್ಕೆ, ಅಧಿವಿಚಾರಣಾ ನ್ಯಾಯಾಲಯವು ತೀರ್ಪು ಪ್ರಕಟಿಸುವ ಮೊದಲು ಯಾವುದೇ ಸಮಯದಲ್ಲೂ ಯಾವುದೇ ಆರೋಪವನ್ನು ಬದಲಾಯಿಸಲು ಅಥವಾ ಸೇರಿಸಲು ಸಾಧ್ಯವಿಲ್ಲ.ಈ ಹಂತದಲ್ಲಿ ದೋಷಾರೋಪವನ್ನು ರೂಪಿಸಲು ಇತರ ಅಪರಾಧಗಳನ್ನು ಅನ್ವಯಿಸುವುದಕ್ಕಾಗಿ ಪ್ರಾಸಿಕ್ಯೂಷನ್ ಅರ್ಜಿಯನ್ನು ಸಲ್ಲಿಸುವುದು ಮತ್ತು ತನಿಖೆಗಾಗಿ ಪ್ರಕರಣವನ್ನು ಮುಂದುವರೆಸುವುದು ಪ್ರಾಸಿಕ್ಯೂಷನ್ನ ಧಿವಿಚಾರಣೆಯ ರೀತಿಯಲ್ಲಿ ಮಾತ್ರ ಬರುತ್ತದೆ.ಆದರೆ, ಸದ್ಯದ ಪ್ರಕರಣದಲ್ಲಿ,ದಿನಾಂಕ: 09.06.2015 ರಂದು ಆರೋಪಗಳನ್ನು ರೂಪಿಸಲಾಗಿದೆ ಮತ್ತು ಆರೋಪಿಗಳು ಲತಾ ಅವರಿಗೆ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿದ್ದರು ಎಂಬ ಆರೋಪಕ್ಕಾಗಿ ಹಾಗೂ ಭಾರತ ದಂಡ ಸಂಹಿತೆಯ 302 ನೇ ಪ್ರಕರಣದ ಅಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ ಮಾಡಲಾದ ಆಪಾದನೆಗಾಗಿಯೂ ಸಹ ಅಧಿವಿಚಾರಣೆಯನ್ನು ಎದುರಿಸುತ್ತಿದ್ದಾರೆ.ಆಕೆ ತನ್ನ ಮದುವೆಯ ದಿನಾಂಕದಿಂದ ಕೇವಲ ಏಳು ವರ್ಷಗಳೊಳಗೆ ಸಾವನ್ನಪ್ಪಿದ್ದಾಳೆ ಎಂಬ ಕಾರಣಮಾತ್ರದಿಂದಲೇ ವಧು-ವರ ವರದಕ್ಷಿಣೆ ನಿಷೇಧ ಅಧಿನಿಯಮ, 1961 ರ 3 ಮತ್ತು 4 ನೇ ಪ್ರಕರಣದ ಅಡಿಯಲ್ಲಿ ಬರುವ ಅಪರಾಧಗಳನ್ನು ಹಾಗೂ ಆಪಾದಿತರ ವಿರುದ್ಧ ಅಧಿವಿಚಾರಣಾ ನ್ಯಾಯಾಲಯವು ರೂಪಿಸಿದ ಆರೋಪಗಳಲ್ಲಿ ಪ್ರತಿಬಿಂಬಿತವಾಗಿರುವ ಇತರ ಅಪರಾಧಗಳನ್ನು ಸಹ ಅನ್ವಯಿಸಲಾಗಿದೆ.

7. ಆದುದರಿಂದ, ಪ್ರಾಸಿಕ್ಯೂಷನ್ ಒದಗಿಸಿದ ಸಾಕ್ಷ್ಯಗಳ ಆಧಾರದ ಮೇಲೆ ಒಮ್ಮೆ ತೀರ್ಪು ನೀಡಲು ಮತ್ತು ತನಿಖೆಯ ಅವಧಿಯಲ್ಲಿ ತನಿಖಾಧಿಕಾರಿಯಿಂದ ಪಡೆದುಕೊಂಡಿರುವ ದಸ್ತಾವೇಜುಗಳನ್ನು ಗುರುತಿಸಲು ಸಹ ಪ್ರಕರಣವನ್ನು ನಿಗದಿಪಡಿಸಿದಾಗ, ಕಾನೂನು ಪ್ರಕಾರ, ಅದು ಸಾಕ್ಷ್ಯಗಳ ಗುಣಾವಗುಣಗಳ ವಿವೇಚನೆ ಮಾಡಲು ಮತ್ತು ತೀರ್ಪು ನೀಡಲು ಅಧಿವಿಚಾರಣಾ ನ್ಯಾಯಾಲಯಕ್ಕೆ ವಹಿಸಲಾದ ಅಧಿಕಾರವಾಗಿದೆ ಎಂದು ಹೇಳಲಾಗಿದೆ.ಆದುದರಿಂದ, ಈ ಹಂತದಲ್ಲಿ, ಭಾರತ ದಂಡ ಸಂಹಿತೆಯ 306 ನೇ ಪ್ರಕರಣದ ಅಡಿಯಲ್ಲಿ ಹೆಚ್ಚುವರಿ ದೋಷಾರೋಪವನ್ನು ಹೊರಿಸಲು ಮತ್ತು ರೂಪಿಸಲು ದಂಡ ಪ್ರಕ್ರಿಯಾ ಸಂಹಿತೆಯ 221 ನೇ ಪ್ರಕರಣದೊಂದಿಗೆ ಓದಲಾದ 216 ನೇ ಪ್ರಕರಣದ ಅಡಿಯಲ್ಲಿ ಪ್ರಾಸಿಕ್ಯೂಷನ್ ಅರ್ಜಿ ಸಲ್ಲಿಸುವ ಪ್ರಮೇಯವೇ ಇಲ್ಲ. ಪರಿಣಾಮವಾಗಿ, ಅರ್ಜಿದಾರರ ಪರ ಮಾನ್ಯ ವಕೀಲರ ವಾದವು ಸಮರ್ಥನೀಯವಾಗಿದ್ದು, ಮಧ್ಯಪ್ರವೇಶವನ್ನು ಸಮರ್ಥಿಸಲಾಗಿದೆ.ಇಲ್ಲದಿದ್ದರೆ, ನಿಸ್ಸಂಶಯವಾಗಿ ನ್ಯಾಯದ ವಿಫಲತೆ ಉಂಟಾಗುತ್ತದೆ ಹಾಗೂ ಕಾನೂನು ಪ್ರಕ್ರಿಯೆಯ ದುರುಪಯೋಗವಾಗುತ್ತದೆ.ವ್ಯವಹರಣೆಗಳ ಈ ಹಂತದಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 216 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಲಾದ ಅರ್ಜಿಯನ್ನು ಅನುಮತಿಸಿದರೆ, ಆರೋಪಿಗಳ ಆರೋಪದ ತಿರುಳಿಗೆ ಬಾಧಕವಾಗುತ್ತದೆ.

8. ಈ ಮೇಲಿನ ಕಾರಣಗಳ ದೃಷ್ಟಿಯಿಂದ, ಈ ಅರ್ಜಿಯು ಪುರಸ್ಕರಿಸಲು ಅರ್ಹವಾಗಿದೆ ಎಂದು ನಾನು ಪರಿಗಣಿಸುತ್ತೇನೆ:

## ಆದೇಶ

ದಂಡ ಪ್ರಕ್ರಿಯಾ ಸಂಹಿತೆಯ 482 ನೇ ಪ್ರಕರಣದ ಅಡಿಯಲ್ಲಿ ಅರ್ಜಿದಾರರು/ಆರೋಪಿಗಳು ಸಲ್ಲಿಸಿದ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ.ಅದರ ಪರಿಣಾಮವಾಗಿ, ಎಸ್.ಸಿ.ಸಂಖ್ಯೆ .73/2012,ದಿನಾಂಕ: 26.07.2016 ರಲ್ಲಿ ದಾವಣಗೆರೆಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯವು ಹೊರಡಿಸಿದ ಆದೇಶವನ್ನು ರದ್ದುಪಡಿಸಲಾಗಿದೆ.ಪ್ರಶ್ನಿತ ಆದೇಶವನ್ನು ರದ್ದುಪಡಿಸಿದ ಪರಿಣಾಮವಾಗಿ, ದಂಡ ಪ್ರಕ್ರಿಯಾ

ಸಂಹಿತೆಯ 221 ನೇ ಪ್ರಕರಣದೊಂದಿಗೆ ಓದಲಾದ 216 ನೇ ಪ್ರಕರಣದ ಅಡಿಯಲ್ಲಿ ಪ್ರಾಸಿಕ್ಯೂಷನ್ ಅರ್ಜಿಯು ತಿರಸ್ಕೃತವಾಗಿರುತ್ತದೆ.

ಈ ಆದೇಶದಲ್ಲಿ ಮಾಡಲಾದ ಯಾವುದೇ ಅಭಿಪ್ರಾಯವು ಅರ್ಜಿದಾರರ/ಆರೋಪಿಗಳ ವಿರುದ್ಧ ಬಾಕಿ ಇರುವ ಎಸ್.ಸಿ.ಸಂಖ್ಯೆ .73/2012 ರಲ್ಲಿ ಪ್ರಕರಣದ ವಿಲೆಗೆ ಸಂಬಂಧಿಸಿದಂತೆ ಅಧಿವಿಚಾರಣಾ ನ್ಯಾಯಾಲಯದ ವಿವೇಚನೆಯ ಮೇಲೆ ಪ್ರಭಾವವನ್ನು ಬೀರತಕ್ಕದ್ದಲ್ಲ.

ಈ ಆದೇಶದ ಒಂದು ಪ್ರತಿಯನ್ನು ಕಾನೂನು ಪ್ರಕಾರ ಅನುಸರಣೆಗಾಗಿ ಎಸ್.ಸಿ.ಸಂಖ್ಯೆ .73/2012 ರಲ್ಲಿ ಅಧಿವಿಚಾರಣೆಗೆ ಬಾಕಿ ಇರುವ ಅಥವಾ ತೀರ್ಪಿನ ಘೋಷಣೆಗೆ ನಿಗದಿಪಡಿಸಿರುವ ದಾವಣಗೆರೆಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಕ್ಕೆ ರವಾನಿಸಲು ಈ ನ್ಯಾಯಾಲಯದ ರಿಜಿಸ್ಟ್ರಿಗೆ ನಿರ್ದೇಶಿಸಲಾಗಿದೆ.